**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಸ್. ವ್ಹಿ. ಸಂಕನೂರ ರವರ ಶೂನ್ಯ ವೇಳೆ ಪ್ರಶ್ನೆಗೆ ಉತ್ತರಿಸುವ ಬಗ್ಗೆ**

**ಪ್ರಶ್ನೆ**:

ಮೇಲ್ಕಾಣಿಸಿದ ವಿಷಯದಂತೆ ರಾಜ್ಯದ ಸರಕಾರಿ ಶಾಲೆಗಳಲ್ಲಿ ಖರೀದಿ ಗೋಲ್‌ಮಾಲ್ ನಡೆದಿರುವ ಹಾಗೂ ಲ್ಯಾಪ್‌ಟಾಪ್, ಪ್ರೋಜೆಕ್ಟರ್ ಖರೀದಿ ಲೋಪ ಬಿಚ್ಚಿಟ್ಟ ಲೋಕಾಯುಕ್ತ ದಾಳಿ, 12 ಕಚೇರಿಗಳಲ್ಲಿ ದಾಖಲೆ ಪರಿಶೀಲನೆ ಕುರಿತು ದಿನಾಂಕ: 06/12/2025 ರಂದು ವಿಜಯ ಕರ್ನಾಟಕ ಪತ್ರಿಕೆಯಲ್ಲಿ ಸುದ್ದಿ ಪ್ರಕಟವಾಗಿದ್ದು, ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆ ವತಿಯಿಂದ ಸರಕಾರಿ ಶಾಲೆಗಳಿಗೆ ಖರೀದಿಸಿರುವ ಲ್ಯಾಪ್ಟಾಪ್, ಎಲ್‌ಇಡಿ ಪ್ರೊಜೆಕ್ಟರ್ ಸೇರಿ ಇತರ ಎಲೆಕ್ಟ್ರಾನಿಕ್ ವಸ್ತುಗಳ ಖರೀದಿಯಲ್ಲಿ ಆಕ್ರಮನಡೆದಿರುವ ಅಂಶ ಲೋಕಾಯುಕ್ತ ತನಿಖೆಯಿಂದ ಬಯಲಾಗಿದೆ. ಕರ್ತವ್ಯಲೋಪ, ಭ್ರಷ್ಟಾಚಾರ ಸೇರಿದಂತೆ ಹಲವು ಆರೋಪಗಳ ಹಿನ್ನಲೆಯಲ್ಲಿ ಶಾಲಾ ಶಿಕ್ಷಣ ಇಲಾಖೆಗೆ ಸಂಬಂಧಿಸಿದ 12 ಕಚೇರಿಗಳಲ್ಲಿ ಲೋಕಾಯುಕ್ತ ಅಧಿಕಾರಿ ಗಳು ದಾಳಿ ನಡೆಸಿ ದಾಖಲೆ ಪರಿಶೀಲಿಸಿದರು. ಆಗ ಸಾಲು ಸಾಲು ಅಕ್ರಮ ಹಾಗೂ ಲೋಪಗಳು ಬಹಿರಂಗವಾಗಿದೆ.

ಬೆಂಗಳೂರು ನಗರ ಸೇರಿದಂತೆ 11ಕ್ಕೂ ಹೆಚ್ಚು ಜಿಲ್ಲೆಗಳ ಶಾಲೆಗಳಲ್ಲಿ ತಾಂತ್ರಿಕ ಅನುಮೋದನಾ ಸಮಿತಿ (ಟಿಪಿ) ಅನುಮೋದನೆ ಮೇರೆಗೆ ಲ್ಯಾಪ್‌ಟಾಪ್, ಡೆಸ್ಕ್ ಟಾಪ್ ಸೇರಿದಂತೆ ಹಲವು ಎಲೆಕ್ಟ್ರಾನಿಕ್ ವಸ್ತುಗಳನ್ನು ಖರೀದಿಸಲಾಗಿದೆ. ಈ ಖರೀದಿ ಪ್ರಕ್ರಿಯೆಯಲ್ಲಿ ಕಟಿಪಿಪಿ ನಿಯಮಗಳನ್ನು ಉಲ್ಲಂಘಿಸಲಾಗಿದೆ. ಪ್ರತಿ ಯುಪಿಎಸ್ 30 ರಿಂದ 40 ಸಾವಿರಗಳವರೆಗಿನ ಹೆಚ್ಚುವರಿ ಬಿಲ್ ಮಾಡಲಾಗಿದೆ. ಎಲ್‌ಇ ಟಿ.ವಿ. ಖರೀದಿಗೆ ಮಾರುಕಟ್ಟೆ ಬೆಲೆಗಿಂತ 15 ಸಾವಿರ ರೂ. ಹೆಚ್ಚುವರಿ ಪಾವತಿಸಲಾಗಿದೆ. ಕಂಪ್ಯೂಟರ್ ಖರೀದಿಗೆ 10 ಸಾವಿರ ರೂ. ಹೆಚ್ಚಿಗ ನೀಡಲಾಗಿದೆ. ಬೆಂಗಳೂರು ದಕ್ಷಿಣ ಬಿಇಒ ಕಚೇರಿ ಎಸ್ ಡಿಎ ಸೌಭಾಗ್ಯ ಅವರ ಫೋನ್ ಪೇನಲ್ಲಿ ಕಳೆದ ತಿಂಗಳು 50ರಿಂದ 60 ಸಾವಿರ ರೂ. ವರ್ಗಾವಣೆ ನಡೆದಿದೆ. ಕಚೇರಿ ಅಧೀಕ್ಷಕ ಶಿವಾನಂದ ಕುಮಾರ್ ಅವರ ಫೋನ್ ಪೇನಲ್ಲಿ ಲಕ್ಷ ರೂ. ಗಳಿಗೂ ಅಧಿಕ ವಹಿವಾಟು ನಡೆದಿದೆ. ಬಿಇಒ ಫೋನಿಗೆ ಆಗಾಗ್ಗೆ, ಐದು ಸಾವಿರ, 10 ಸಾವಿರ ರೂ. ಜಮೆ ಆಗಿದೆ. ಈ ಹಣ ವರ್ಗಾವಣೆಯ ಮೂಲದ ವಿವರ ನೀಡುವಂತೆ ಅಧಿಕಾರಿಗಳು ಕೇಳಿರುವ ಕುರಿತು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಉನ್ನತ ಅಧಿಕಾರಿಗಳ ತನಿಖಾ ಸಮಿತಿ ರಚಿಸಿ ತಪ್ಪಿತಸ್ಥರ ಮೇಲೆ ಕಠಿಣ ಕ್ರಮ ಜರುಗಿಸಲು ಒತ್ತಾಯಿಸುವೆನು. ಇದಲ್ಲದೇ ಇದೇ ರೀತಿಯ ಅಕ್ರಮಗಳು ಬೇರೆ ಜಿಲ್ಲೆಗಳಲ್ಲಿ ನಡೆದಿರುವದೋ ಎಂಬುದರ ಬಗ್ಗೆ, ಖಾತ್ರಿಪಡಿಸಿಕೊಳ್ಳಲು ಪ್ರತ್ಯೇಕ ಸಮಿತಿ ರಚಿಸಲು ಒತ್ತಾಯಿಸುತ್ತೇನೆ.

**ಉತ್ತರ**:

ಬೆಂಗಳೂರು ಉತ್ತರ ಮತ್ತು ಬೆಂಗಳೂರು ದಕ್ಷಿಣ ಜಿಲ್ಲೆಗಳಿಗೆ 2023-24 ಮತ್ತು 2024-25 ನೇ ಸಾಲಿಗೆ ಸಂಬಂಧಿಸಿದಂತೆ ಕ್ರಮವಾಗಿ 32 ಮತ್ತು 52 ಸರ್ಕಾರಿ ಶಾಲೆಗಳಿಗೆ ಸಮಗ್ರ ಶಿಕ್ಷಣ ಕರ್ನಾಟಕ ಕಛೇರಿಯಿಂದ ನೀಡಿದ ಸುತ್ತೋಲೆ ಹಾಗೂ TAP Proceedings ನಲ್ಲಿ ಅನುಮೋದಿತ specifications ನಂತೆ

ಲ್ಯಾಪ್‌ಟಾಪ್, All in One ಕಂಪ್ಯೂಟರ್, UPS with Battery ಮತ್ತು LED Display ಉಪಕರಣಗಳನ್ನು ಖರೀದಿಸಲು ತಿಳಿಸಲಾಗಿರುತ್ತದೆ. ಈ ಸಂಬಂಧ ಬೆಂಗಳೂರು ಉತ್ತರ ಜಿಲ್ಲೆಗೆ ರೂ. 148.10 ಲಕ್ಷಗಳು ಮತ್ತು ಬೆಂಗಳೂರು ದಕ್ಷಿಣ ಜಿಲ್ಲೆಗೆ ರೂ. 250.35 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ.

ಮೇಲ್ಕಂಡ ಎರಡೂ ಜಿಲ್ಲೆಗಳಲ್ಲಿ ಸದರಿ ಉಪಕರಣಗಳ ಖರೀದಿ ಪ್ರಕ್ರಿಯೆಯ ಬಗ್ಗೆ ಪರಿಶೀಲಿಸಲಾಗುತ್ತಿದೆ. ಖರೀದಿ ಪ್ರಕ್ರಿಯೆಯಲ್ಲಿ ಯಾವುದೇ ಲೋಪದೋಷಗಳು ಉಂಟಾಗಿರುವುದು ಮತ್ತು ನಿಯಮಗಳು ಉಲ್ಲಂಘನೆಯಾಗಿರುವುದು ವರದಿಯಿಂದ ಕಂಡುಬಂದಲ್ಲಿ ಇಲಾಖಾ ನಿಯಮಾನುಸಾರ ಸಂಬಂಧಿಸಿದವರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲಾಗುವುದು.

**ಇಪಿ 102 ಇ-ಆಡಳಿತ 2025**

**(ಎಸ್. ಮಧು ಬಂಗಾರಪ್ಪ)**
**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು**